**Deposition Sheets (RP.No.57) Form No.4 (Civil)**

**IN THE COURT OF CIVIL JUDGE & J.M.F.C., KARKALA.**

**Criminal Case No.397/2017**

**ಪಿ.ಡಬ್ಲು ಃ 15 ಸಿ.ಡಬ್ಲು ಃ 20**

ಸಾಕ್ಷಿದಾರನ ಹೆಸರು ಃ ರಫಿಕ್ ಎಂ
ತಂದೆಯ ಹೆಸರು ಃ ಮುಜಿಬ್
ಪ್ರಾಯ ಃ 38 ವರ್ಷ
ಉದ್ಯೋಗ ಃ ಪೊಲೀಸ್ ನೀರಿಕ್ಷಕರು, ಲೋಕಾಯಕ್ತ ಪೊಲೀಸ್ ಠಾಣೆ
ವಾಸ ಃ ಉಡುಪಿ

ದಿನಾಂಕ 23.08.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ನಾನು ದಿಃ20.04.2016 ರಿಂದ 01.02.2017 ರವರೆಗೆ ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪನೀರಿಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಆರೋಪಿಯನ್ನು ವಿ. ಸಿ. ಮೂಲಕ ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ದಿಃ 05-12-2016 ರಂದು ಪ್ರಕರಣದ ಕಡತವನ್ನು ಚಾಸಾ19 ರವರಿಂದ ಪಡೆದುಕೊಂಡು ಠಾಣಾ ಅಕ್ರ ನಂ.219/16 ರಲ್ಲಿ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಕೃತ್ಯ ನಡೆದ ಸ್ಥಳವನ್ನು ಶ್ವಾನದಳ ಹಾಗೂ ಬೆರಳಚ್ಚು ಮುದ್ರೆ ತಜ್ಞರಿಂದ ಪರಿಶೀಲನೆ ನಡೆಸಲಾಯಿತು. ನಂತರ ಕೃತ್ಯ ನಡೆದ ಸ್ಥಳದ ಮಹಜರನ್ನು ಚಾಸಾ-1 ಪಿರ್ಯಾದುದಾರರು ತೋರಿಸಿಕೊಟ್ಟಂತೆ ಪಂಚರಾದ ಚಾಸಾ4 ಮತ್ತು 5 ರವರ ಸಮಕ್ಷಮ ಮದ್ಯಾಹ್ನ 2.00 ಗಂಟೆಯಿಂದ 3.00 ಗಂಟೆಯವರೆಗೆ ಮಹಜರು ಕ್ರಮವನ್ನು ನಡೆಸಲಾಯಿತು. ಸ್ಥಳದಲ್ಲಿ ಬಾಗಿಲಿನ ಬೀಗ, ಚಿಲಕ ಮತ್ತು 2 ಕಬ್ಬಿಣದ ರಾಡುಗಳನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ. ನಂತರ ತಕ್ಷೀರು ಸ್ಥಳದ ನೆರೆವನೆಯವರಾದ ರತಿ ಶೆಡ್ತಿ ರವರ ಮನೆಯ ಬಾಗಿಲು ಮುರಿದು ಕಳ್ಳರು ಮನೆಯ ಒಳಗೆ ಪ್ರವೇಶಿಸಿ ಕಳ್ಳತನಕ್ಕೆ ಪ್ರಯತ್ನಿಸಿದ್ದು ನಂತರ ಸದ್ರಿ ಸ್ಥಳದ ಮಹಜರನ್ನು ಮಧ್ಯಾಹ್ನ 3.15 ಗಂಟೆಯಿಂದ 4.00 ಗಂಟೆಯವರೆಗೆ ಮಹಜರು ಕ್ರಮವನ್ನು

ಜರುಗಿಸಲಾಯಿತು. ನಂತರ ಸ್ವಾಧೀನ ಪಡಿಸಿಕೊಂಡ ಸೊತ್ತಿನೊಂದಿಗೆ ಠಾಣೆಗೆ ಬಂದು ಸೊತ್ತು ಪಟ್ಟಿಯಲ್ಲಿ ದಾಖಲಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ನಂತರ ಆರೋಪಿಯ ಪತ್ತೆಯ ಬಗ್ಗೆ ಸಿಬ್ಬಂದಿಯವರನ್ನು ನೇಮಕ ಮಾಡಿರುತ್ತೇನೆ. ದಿನಾಂಕ 11-12-2016 ರಂದು ಪ್ರಕರಣದ ತನಿಖೆಯನ್ನು ಮುಂದುವರಿಸಿ ಉಡುಪಿ ಜಿಲ್ಲಾ ಬೆರಳು ಮುದ್ರೆ ತಜ್ಞರು ಘಟನಾ ಸ್ಥಳ ಪರಿಶೀಲನೆಯ ಸಂಧರ್ಭ ಸಂಗ್ರಹಿಸಿದ ಬೆರಳಚ್ಚು ಮುದ್ರೆಯನ್ನು ತಪಾಸಣೆ ನಡೆಸಿ ಸದ್ರಿ ಬೆರಳಚ್ಚು ಮುದ್ರೆಯು ಹೆಬ್ರಿ ಪೋಲೀಸ್ ಠಾಣೆಯ ಹಳೆಯ ಅರೋಪಿ ಉಮಾನಾಥ ಪ್ರಭು ಇವನ ಬೆರಳು ಮುದ್ರೆಗೆ ತುಲನೆಯಾಗುತ್ತಿರುವುದಾಗಿ ಮಾಹಿತಿ ನೀಡಿದಂತೆ ನಾನು ಚಾಸಾ-15 ಮತ್ತು 16 ರವರನ್ನು ಆರೋಪಿ ಪತ್ತೆಯ ಬಗ್ಗೆ ನೇಮಕ ಮಾಡಿ ಕಳುಹಿಸಿಕೊಟ್ಟಿದ್ದು ಸದ್ರಿ ಸಿಬ್ಬಂದಿಗಳು ಆರೋಪಿತನನ್ನು ಮುಂಡುಕೂರು ಬಸ್ಸು ನಿಲ್ದಾಣದ ಬಳಿ ಬೆಳ್ಳಿಗ್ಗೆ 7.00 ಗಂಟೆಗೆ ವಶಕ್ಕೆ ಪಡೆದು ಠಾಣೆಯಲ್ಲಿ ಬೆಳ್ಳಿಗ್ಗೆ 8.00 ಗಂಟೆಗೆ ನನ್ನ ಮುಂದೆ ಹಾಜರು ಪಡಿಸಿರುತ್ತಾರೆ. ನಂತರ ಸದ್ರಿ ಆರೋಪಿತನನನ್ನು ಕೂಲಂಕುಷವಾಗಿ ವಿಚಾರಣೆಗೊಳಪಡಿಸಿ ಆರೂಪಿತನ ಸ್ವ ಇಚ್ಚೆ ಹೇಳಿಕೆಯನ್ನು ಬೆಳ್ಳಿಗ್ಗೆ 8.10 ಗಂಟೆಯಿಂದ 9.40 ಗಂಟೆಯವರಗೆ ಪಡೆದುಕೊಂಡಿರುತ್ತೇನೆ. ನಂತರ ಆರೋಪಿತನು ತನ್ನ ಸ್ವ ಇಚ್ಚಾ ಹೇಳಿಕೆಯಲ್ಲಿ ದಿನಾಂಕ 04-12-2016 ರಂದು ಮುಂಡುಕೂರು ಗ್ರಾಮದಲ್ಲಿ ರಾತ್ರಿ 2 ಮನೆಗೆ ಕಳವು ಮಾಡಲು ಹೋಗಿದ್ದಾಗಿ ಹಾಗೂ ಈ ಹಿಂದೆ ಸುಮಾರು 8 ಕಡೆಗಳಲ್ಲಿ ಕನ್ನ ಕಳವು ಮಾಡಿದ್ದಾಗಿ ಹಾಗೂ ಸದ್ರಿ ಕಳವು ಮಾಡಿದಾಗ ದೊರೆತ ಚಿನ್ನಾಭರಣಗಳನ್ನು ಮಂಗಳೂರಿನ ವಿ ಆರ್ ಎಸ್ ಫೈನಾನ್ಸ್ ಗೆ ಹಾಗೂ ಬೆಳ್ಳಿಯ ಆಭರಣಗಳನ್ನು ಮೂಡಬಿದ್ರೆಯ ಸುಧಾ ಜ್ಯುವೆಲ್ಲರ್ಸ್ ರವರಿಗೆ ಮಾರಾಟ ಮಾಡಿರುತ್ತೇನೆ. ಹಾಗೂ ಮಿಯಾರು ಗ್ರಾಮದಲ್ಲಿ ಕಳವು ಮಾಡಿದ ನಗದು ಹಣ 14,950/- ರೂಪಾಯಿ ಆರೋಪಿಯ ಪ್ಯಾಂಟಿನ ಕಿಸೆಯಲ್ಲಿದ್ದು, ಜನೆಕ್ಸ್ ಗೊಲ್ಡ್ ಎಂದು ಬರೆದಿರುವ ಕೈ ಗಡಿಯಾರವನ್ನು ಆರೂಪಿತನು ತನ್ನ ಕೈಯಲ್ಲಿ ಕಟ್ಟಿ ಕೊಂಡಿರುವುದಾಗಿ ತಿಳಿಸಿರುತ್ತಾನೆ. ಸದ್ರಿ ನಗದು ಹಣ ಹಾಗೂ ಕೈ ಗಡಿಯಾರವನ್ನು ದಸ್ತಗಿರಿ ಮಹಜರು ಸಮಯ ಸ್ವಾಧೀನ ಪಡಿಸಿಕೊಂಡು ಚಾಸಾ 6 ಮತ್ತು 7 ರವರ ಸಮಕ್ಷಮ ದಸ್ತಗಿರಿ ಕ್ರಮವನ್ನು ಜರುಗಿಸಿರುತ್ತೇನೆ. ನಂತರ ಆರೋಪಿತನು ತನ್ನ ಸ್ವಇಚ್ಚಾ ಹೇಳಿಕೆಯಲ್ಲಿ ತಿಳಿಸಿದಂತೆ ಘಟನಾ ಸ್ಥಳದ ಮಹಜರು ಕ್ರಮವನ್ನು ಜರುಗಿಸಲು ಚಾಸಾ 13 ಮತ್ತು 14 ರವರನ್ನು ಠಾಣೆಗೆ ಬರಮಾಡಿಕೊಂಡು ಸದ್ರಿಯವರಿಗೆ ಮಹಜರು ಕ್ರಮವನ್ನು ಜರುಗಿಸುವ ಸಮಯ ಪಂಚರಾಗಿ ಸಹಕರಿಸಲು ಕೋರಿಕೊಂಡಿದ್ದು ಸದ್ರಿಯವರು ಒಪ್ಪಿ

ಠಾಣೆಯಿಂದ ಇಲಾಖಾ ಜೀಪಿನಲ್ಲಿ ಪಂಚರು ಮತ್ತು ಆರೋಪಿಯೊಂದಿಗೆ ಹೊರಟು ವಿವಿಧ ಕಳ್ಳತನದ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಟ್ಟು 10 ಸ್ಥಳಗಳಲ್ಲಿ ಆರೋಪಿ ತೋರಿಸಿದಂತೆ ಮಹಜರು ಕ್ರಮವನ್ನು ಜರುಗಿಸಿರುತ್ತೇನೆ. ಸದ್ರಿ ಮಹಜರು ಕ್ರಮವನ್ನು ಮಧ್ಯಾಹ್ನ 1.45 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಜರುಗಿಸಲಾಯಿತು. ನಂತರ ಆರೋಪಿತನು ಚಿನ್ನ ಮತ್ತು ಬೆಳ್ಳಿಯ ಆಭರಣಗಳನ್ನು ಸಂಬಂಧಪಟ್ಟವರಿಂದ ಸ್ವಾಧೀನ ಪಡಿಸಿಕೊಳ್ಳಲು ಆರೋಪಿತನನ್ನು ಪೋಲೀಸ್ ಅಭಿರಕ್ಷಣೆಗೆ ಕೋರಿ ರಿಮ್ಯಾಂಡ್ ವರದಿಯೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ದಿನಾಂಕ 14-12-2016 ರಂದು ಮಾನ್ಯ ನ್ಯಾಯಾಲಯವು ಆರೋಪಿಯನ್ನು ಪೋಲೀಸ್ ಅಭಿರಕ್ಷೆಗೆ ನೀಡಿದ್ದು ಚಿನ್ನ ಮತ್ತು ಬೆಳ್ಳಿಯ ಆಭರಣಗಳನ್ನು ಸ್ವಾಧೀನ ಪಡಿಸಿಕೊಳ್ಳಲು ಚಾಸಾ 11 ಮತ್ತು 12 ರವರನ್ನು ಠಾಣೆಗೆ ಪಂಚರನ್ನಾಗಿ ಬರಮಾಡಿಕೊಂಡು ಮಹಜರು ಕ್ರಮ ಜರುಗಿಸುವ ಸಮಯ ಹಾಗೂ ಸೊತ್ತುಗಳನ್ನು ಸ್ವಾಧೀನ ಪಡಿಸಿಕೊಳ್ಳುವ ಸಮಯ ಜೊತೆಯಲ್ಲಿ ಪಂಚರಾಗಿದ್ದು ಸಹಕರಿಸುವಂತೆ ಕೋರಿಕೊಂಡಿದ್ದು ಸದ್ರಿಯವರು ಒಪ್ಪಿಕೊಂಡಿದ್ದು  ಪಂಚರು, ಆರೋಪಿ ಹಾಗೂ ಚಾಸಾ 10 ರವರೊಂದಿಗೆ ಇಲಾಖಾ ಜೀಪಿನಲ್ಲಿ ಠಾಣೆಯಿಂದ ಬೆಳಿಗ್ಗೆ 7.30 ಗಂಟೆಗೆ ಠಾಣೆಯಿಂದ ಹೊರಟು ಮೂಡಬಿದ್ರೆಗೆ ತಲುಪಿ ಆರೋಪಿ ತೋರಿಸಿದಂತೆ ಸುಧಾ ಜ್ಯುವೆಲ್ಲರ್ಸ್ ಆಭರಣ ಅಂಗಡಿ ಬಳಿ ನಿಲ್ಲಿಸುವಂತೆ ಸೂಚಿಸಿ ತಾನು ಕಳವು ಮಾಡಿದ ಬೆಳ್ಳಿಯ ಸಾಮಾನುಗಳನ್ನು ಮಾರಾಟ ಮಾಡಿರುವ ಆಭರಣದ ಅಂಗಡಿ ಇದೆ ಎಂದು ತೋರಿಸಿದಂತೆ ಸದ್ರಿ ಅಂಗಡಿಯ ಮಾಲೀಕನನ್ನು ವಿಚಾರಿಸಿದಾಗ ತನ್ನ ಹೆಸರು ಹರೀಶ್ ಆಚಾರ್ಯ ಎಂಬುದಾಗಿ ತಿಳಿಸಿ ಆಪಾದಿತನನ್ನು ಗುರುತಿಸಿ ಬೆಳ್ಳಿಯ ಸಾಮಾನುಗಳನ್ನು ತನಗೆ ಮಾರಾಟ ಮಾಡಿರುವ ಬಗ್ಗೆ ಒಪ್ಪಿಕೊಂಡು ಮಾರಾಟ ಮಾಡಿರುವ ಬೆಳ್ಳಿ ಸಾಮಾನುಗಳನ್ನು ತನ್ನ ಬಳಿ ಇಟ್ಟುಕೊಂಡಿದ್ದು ನಂತರ ತಂದು ಹಾಜರು ಪಡಿಸಿರುತ್ತಾರೆ. ಪಂಚರ ಸಮಕ್ಷಮ ಸದ್ರಿ ಬೆಳ್ಳಿಯ ಸಾಮಾನುಗಳನ್ನು ಪರಿಶೀಲಿಸಲಾಗಿ (1) ಬೆಳ್ಳಿಯ ಹಳೆಯದಾದ ಕಾಲು ಚೈನು 2 ಜೊತೆ, (2) ಬೆಳ್ಳಿಯ ಹಳೆಯ ಸೊಂಟದ ಉಡುದಾರ 2, (3) ಬೆಳ್ಳಿಯ ತಗಡಿನ ತುಂಡುಗಳು 2, (4) ಹವಳದಿಂದ ಪೋಣಿಸಿದ ಬೆಳ್ಳಿಯ ಸರ 1, (5) ಬೆಳ್ಳಿಯ ಉಂಗುರಗಳು 2, (6) ಬೆಳ್ಳಿಯ ಲೋಟಗಳು 2, (7) ಬೆಳ್ಳಿಯ ಕಾಲುದೀಪ 2, (8) ಬೆಳ್ಳಿಯ ಸೊಂಟದ ಉಡುದಾರಗಳು 4 ಇದ್ದು ಸದ್ರಿ ಬೆಳ್ಳಿಯ ಸಾಮಾನುಗಳನ್ನು ಚಾಸಾ 10 ರವರಿಂದ ತೂಕ ಮಾಡಿಸಿ ನಂತರ ಪಂಚರ ಸಮಕ್ಷಮ ಸ್ವಾಧೀನ ಪಡಿಸಿಕೊಂಡು ಮಹಜರು ಕ್ರಮವನ್ನು ಬೆಳಿಗ್ಗೆ

8.30 ಗಂಟೆಯಿಂದ 9.30 ಗಂಟೆಯವರೆಗೆ ಜರುಗಿಸಲಾಯಿತು. ನಂತರ ಸಾಕ್ಷಿದಾರರಾದ ಚಾಸಾ 14 ರವರ ಹೇಳಿಕೆಯನ್ನು ದಾಖಲು ಮಾಡಿಕೊಂಡಿರುತ್ತೇನೆ. ನಂತರ ಮೂಡಬಿದ್ರೆಯಿಂದ ಹೊರಟು ಆರೋಪಿಯು ತಿಳಿಸಿದಂತೆ ಮಂಗಳೂರಿನ ಹಂಪನಕಟ್ಟೆಗೆ ತಲುಪಿ ಹಳೆ ಬಸ್ಸು ನಿಲ್ದಾಣದ ಬಳಿ ವಾಹನವನ್ನು ನಿಲ್ಲಿಸುವಂತೆ ಆರೋಪಿಯು ಸೂಚಿಸಿದ್ದು ವಾಹನದಿಂದ ಕೆಳಗಿಳಿದು ತನ್ನೊಂದಿಗೆ ಬರುವಂತೆ ಪಂಚಾಯತುದಾರರು ಹಾಗೂ ತನಿಖಾಧಿಕಾರಿಯವರು ತಿಳಿಸಿ ವಿ ಆರ್ ಎಸ್ ಫೈನಾನ್ಸ್ ಕಚೇರಿಯನ್ನು ತೋರಿಸಿ ಇದೇ ಕಚೇರಿಯಲ್ಲಿ ತಾನು ಕಳುವು ಮಾಡಿದ ಚಿನ್ನಾಭರಣಗಳನ್ನು ಮಾರಾಟ ಮಾಡಿರುವುದಾಗಿ ತಿಳಿಸಿದ್ದು ಸದ್ರಿ ಫೈನಾನ್ಸ್ ನ ಮ್ಯಾನೇಜರ್ ಚಾಸಾ 9 ರವರು ಆಪಾದಿತನನ್ನು ಗುರುತಿಸಿ ಮೂರು ಭಾರಿ ತನ್ನ ಬಳಿ ಚಿನ್ನಾಭರಣವನ್ನು ಮಾರಾಟ ಮಾಡಲು ಬಂದಿರುವುದಾಗಿ ತಿಳಿಸಿ ಸದ್ರಿ ಚಿನ್ನಾಭರಣಗಳನ್ನು ತೆಗೆದಿರಿಸಿದ್ದು ಪಂಚರ ಸಮಕ್ಷಮ ಹಾಜರು ಪಡಿಸಲಾಗಿ ಚಾಸಾ 10 ರ ಸಮಕ್ಷಮ ಧೃಢೀಕರಿಸಿ ತೂಕಮಾಡಲಾಗಿ ಒಟ್ಟು 20 ಚಿನ್ನದ ಆಭರಣಗಳನ್ನು ಪಂಚರ ಸಮಕ್ಷಮ ಸ್ವಾಧೀನ ಪಡಿಸಿ ಮಹಜರು ಕ್ರಮವನ್ನು ಸ್ಥಳದಲ್ಲಿ ಜರುಗಿಸಲಾಯಿತು. ಒಟ್ಟು 123 ಗ್ರಾಮ್ 620 ಮಿಲಿ ಅಂದಾಜು ಮೌಲ್ಯ 3,25,000/- ಎಂದು ಪಂಚರು ಅಭಿಪ್ರಾಯ ಪಟ್ಟಿರುತ್ತಾರೆ. ದಿ:14.12.2016 ರಂದು ಚಾಸಾ-9 ರವರು ಹಾಜರುಪಡಿಸಿದಂತಹ ವಿವಿಧ ರೀತಿಯ ಒಟ್ಟು 20 ಚಿನ್ನದ ಆಭರಣಗಳನ್ನು ಅಮಾನತುಪಡಿಸಿಕೊಂಡಿರುತ್ತೇನೆ. ಅವುಗಳ ವಿವರ ಕೆಳಗಿನಂತಿದೆ

1. ಚಿನ್ನದ ಉಂಗುರ -3 ಒಟ್ಟು ತೂಕ 9.100 ಗ್ರಾಂ
2. ಚಿನ್ನದ ಮೂಗುತಿ ಬೊಟ್ಟು-3 ಒಟ್ಟು ತೂಕ 830 ಮಿಲಿ ಗ್ರಾಂ
3. ಪಿ ಟಿ ಎಂದು ಬರೆದ ಉಂಗುರ -1 ತೂಕ 7.830 ಗ್ರಾಂ
4. ಕ್ರಾಸ್ ಗುರುತಿನ ಚಿನ್ನದ ಉಂಗುರ -1 ತೂಕ 7.20 ಗ್ರಾಂ
5. ಚಿನ್ನದ ಪ್ಲೇನ್ ಉಂಗುರ-1 ತೂಕ 5.50 ಗ್ರಾಂ
6. ಚಿನ್ನದ ಲಕ್ಷ್ಮಿ ಪೆಂಡೆಂಟ್ ಇರುವ ಹವಳದ ಚೈನ್ -1 ತೂಕ 27.460 ಗ್ರಾಂ
7. ಆರ್ ಮಾರ್ಕ ಇರುವ ಉಂಗುರ-1 ತೂಕ 4.380 ಗ್ರಾಂ
8. ಚಿನ್ನದ ಉಂಗುರ-1 ತೂಕ 2.980 ಗ್ರಾಂ
9. ಚಿನ್ನದ ಚೈನು-1 ತೂಕ 9.910 ಗ್ರಾಂ

10. ಬಿಳಿ ಕಲ್ಲು ಇರುವ ಟಿಕ್ಕಿ -2 ತೂಕ 4.270 ಗ್ರಾಂ

11. ಚಿನ್ನದ ಜಿಲೆಬಿ ಚೈನು -1 ತೂಕ 16.230 ಗ್ರಾಂ

12. ಲಕ್ಷ್ಮಿ ಚಿತ್ರ ಇರುವ ಲಾಕೆಟ್ -1 ತೂಕ 4.550 ಗ್ರಾಂ

13. ಚಿನ್ನದ ಉಂಗುರ 1 ತೂಕ 1.550 ಗ್ರಾಂ

14. ಗಣಪತಿ ಚಿತ್ರ ಇರುವ ಚಿನ್ನದ ಲಾಕೇಟ್ -1 ತೂಕ 1.980 ಗ್ರಾಂ

15. ಲಕ್ಷ್ಮಿ ಚಿತ್ರ ಇರುವ ಚಿನ್ನದ ಲಾಕೇಟ್ -1 ತೂಕ 1.970 ಗ್ರಾಂ

16. ಚಿನ್ನದ ಮೂಗುತಿ ಬೊಟ್ಟು-1 ತೂಕ 420 ಮಿಲಿ ಗ್ರಾಂ

17. ಚಿನ್ನದ ಉಂಗುರ -1 ತೂಕ 4.160 ಗ್ರಾಂ

18. ಚಿನ್ನದ ಉಂಗುರ -1 ತೂಕ 6.100 ಗ್ರಾಂ

19. ಚಿನ್ನದ ಉಂಗುರ -1 ತೂಕ 6.030 ಗ್ರಾಂ

20. ಚಿನ್ನದ ಬೆಂಡೋಲೆ -1 ಜೊತೆ ತೂಕ 8.460 ಗ್ರಾಂ.

ಸದ್ರಿ ಚಿನ್ನಾಭರಣಗಳನ್ನು ಅಕ್ಕಸಾಲಿಗ ಚಾಸಾ-10 ರವರಿಂದ ದೃಢಿಕರಿಸಿ ತೂಕ ಮಾಡಿಸಿ ಮಹಜರು ಮುಖೇನ ಅಮಾನತುಪಡಿಸಿಕೊಂಡಿರುತ್ತೇನೆ. ಸದ್ರಿ ಚಿನ್ನಾಭರಣಗಳ ಒಟ್ಟು ತೂಕ 123.620 ಗ್ರಾಂ ಆಗಿದ್ದು, ಮೌಲ್ಯ ರೂ.3,25,000/- ಆಗಬಹುದು.

ನಂತರ ಆರೋಪಿ ಪಂಚರು ಹಾಗೂ ಚಾಸಾ 10 ರವರೊಂದಿಗೆ ಸೊತ್ತುಗಳನ್ನು ಸೊತ್ತು ಪಟ್ಟಿಯಲ್ಲಿ ದಾಖಲಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡು ಅದೇ ದಿನ ಆರೋಪಿತನನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ ಹಾಗೂ ಸ್ವಾಧೀನ ಪಡಿಸಿಕೊಂಡ ಸೊತ್ತುಗಳನ್ನು ಸಂಬಂಧ ಪಟ್ಟ ಪೊಲೀಸ್ ಠಾಣೆಗಳಿಗೆ ವರ್ಗಾವಣೆ ನೀಡಲು ಅನುಮತಿ ಕೋರಿ ಮಾನ್ಯ ನ್ಯಾಯಾಲಯಕ್ಕೆ ನಿವೇದನೆಯನ್ನು ಸಲ್ಲಿಸಿರುತ್ತೇನೆ.

ದಿಃ17.12.2016 ರಂದು ಪ್ರಕರಣದಲ್ಲಿ ಸ್ವಾಧೀನಪಡಿಸಿಕೊಂಡ ಸೊತ್ತುಗಳನ್ನು ಮಾನ್ಯ ನ್ಯಾಯಾಲಯದ ಆದೇಶದಂತೆ ಸಂಬಂದಪಟ್ಟ ಪೊಲೀಸ್ ಠಾಣೆಗೆ ವರ್ಗಾವಣೆ ಮಾಡಲಾಯಿತು. ದಿಃ07.01.2017 ರಂದು ಬೆರಳು ಮುದ್ರೆ ತಜ್ಞರು ತಮ್ಮ ಬೆರಳು ಮುದ್ರ ವರದಿ ನೀಡಿದ್ದನ್ನು ಸ್ವೀಕರಿಸಿ ಪರಿಶೀಲಿಸಿ ಸದ್ರಿ ಬೆರಳು ಮುದ್ರೆಯು ಆರೋಪಿ ಉಮಾನಾಥ ಪ್ರಭು ರವರ ಬೆರಳು ಮುದ್ರೆಗೆ ತಾಳೆಯಾಗುವುದು ಕಂಡು ಬಂತು. ಹಾಗೂ

ಸದ್ರಿ ಆರೋಪಿಯನ್ನು ಹೆಬ್ರಿ ಪೊಲೀಸ್ ಠಾಣಾ ಅಕ್ರ ನಂ. 88/2007 ರಲ್ಲಿ ಮಾನ್ಯ ನ್ಯಾಯಾಲಯದಲ್ಲಿ ಶಿಕ್ಷೆ ವಿಧಿಸಿದ ತಿರ್ಪಿನ ಪ್ರತಿಯನ್ನು ನ್ಯಾಯಾಲಯದಿಂದ ಸ್ವಿಕರಿಸಿ ಕಡತಕ್ಕೆ ಸೇರಿಸಿಕೊಂಡಿರುತ್ತೇನೆ. ಈ ಪ್ರಕರಣಕ್ಕೆ ಸಂಬಂಧಿಸಿದ ಸೊತ್ತುಗಳಾದ ಬೆಳ್ಳಿಯ ತಗಡು -2, ಚಿನ್ನದ ಕಿವಿಯ ಟಿಕ್ಕಿ-2, ಬೆಳ್ಳಿಯ ಉಂಗುರ-1, ಬೆಳ್ಳಿಯ ಜಪ ಸರ-1 ಇವುಗಳನ್ನು ಚಾಸಾ-21 ರವರ ಸುಪರ್ದಿಗೆ ಹಾಗೂ ಕಡತವನ್ನು ಮುಂದಿನ ತನಿಖೆಗಾಗಿ ಹಸ್ತಾಂತರಿಸಿರುತ್ತೇನೆ.

ಸಾಕ್ಷಿಯು ನಿಪಿ-1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-2 ಭಾವಚಿತ್ರವನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ-3 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-3(ಇ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-6 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-3(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-9 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-11 ಮತ್ತು 12 ರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಗಳನ್ನು ನಿಪಿ-11(ಬಿ) ಮತ್ತು 12(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಕಬೂಲಾತಿ ಹೇಳಿಕೆಯಲ್ಲಿರುವ ತನ್ನಸಹಿಯನ್ನು ನೋಡಿ ಗುರುತಿಸಿದ್ದು ಸದ್ರಿ ಕಬೂಲಾತಿ ಹೇಳಿಕೆಯನ್ನು ನಿಪಿ-13 ಎಂದು , ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು ಮಾ-1 ರಿಂದ 9 ನ್ನು ನೋಡಿ ಗುರುತಿಸಿರುತ್ತಾರೆ.

ನ್ಯಾಯಾಲಯದ ಅವಧಿ ಮುಗಿದ ಕಾರಣ ಪಾಟೀ ಸವಾಲನ್ನು ಮುಂದೂಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಎರಡನೆ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕಾರ್ಕಳ